ಸಾಕ್ಷಿಯನ್ನು ದಿನಾಂಕಃ 29-10-2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಶ್ರೀಃ ಸಿ.ಕೆ.ಎಸ್. ಆರೋಪಿ ಪರ ವಕೀಲರಿಂದಃ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರ್ವದಲ್ಲಿ ಒಟ್ಟು ಎರಡು ಪ್ರ.ವ.ವರದಿಗಳಾಗಿರುತ್ತವೆ . ಆ ಎರಡೂ ಪ್ರಕರಣಗಳಲ್ಲಿ ತನಿಖಾಧಿಕಾರಿ ನಾನೇ ಆಗಿರುತ್ತೇನೆ . ಈ ಪ್ರಕರಣದಲ್ಲಿ ನಾನೇ ಪಿರ್ಯಾದುದಾರನಾಗಿರುತ್ತೇನೆ . ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನಾನು ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಹಿಂದಿನ ಪ್ರಕರಣದಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟಾಗ ನಾನು ಸ್ಥಳ ಮಹಜರಿನೊಂದಿಗೆ ಶವ ಮಹಜರನ್ನೂ ಸಹ ಮಾಡಿರುತ್ತೇನೆ . ಹಿಂದಿನ ಪ್ರಕರಣದಲ್ಲಿ ಸ್ಥಳ ಮಹಜರಿಗೆ ಸಂಬಂಧ ಪಟ್ಟಂತೆ ಎಲ್ಲಾ ವಿವರಗಳನ್ನು ನಮೂದನೆ ಮಾಡಿದ್ದೇನೆ . ಸದರಿ ಸ್ಥಳ ಮಹಜರನ್ನು ಈ ಪ್ರಕರಣದಲ್ಲಿ ನಾನು ಹಾಜರು ಪಡಿಸಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ ಕಡತದಲ್ಲಿ ನಾನು ಶವ ಮಹಜರಿನೊಂದಿಗೆ ಮಾಡಲಾದ ಸ್ಥಳ ಮಹಜರ್ ವಿವರಗಳುಳ್ಳ ದಾಖಲೆ ಇದೆ .

ತಕ್ಷೀರು ಸ್ಥಳವು ಯಾವ ಗ್ರಾಮದಲ್ಲಿ , ಯಾವ ಸರ್ವೇ ನಂಬರಿನಲ್ಲಿ ಬರುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ನಾನು ಆರ್.ಟಿ.ಸಿಯನ್ನು ಪಡೆದುಕೊಂಡಿರುವುದಿಲ್ಲ, ತಕ್ಷೀರಿಗೆ ಸಂಬಂಧಿಸಿದಂತೆ ನಾನು ಯಾವುದೇ ಕರಡು ನಕ್ಷೆಯನ್ನು ತಯಾರಿಸಿರುವುದಿಲ್ಲ . ನಾನು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ , ಎಲ್ಲಾ ದಾಖಲೆಗಳನ್ನು ನಾನು ಪ್ರಕರಣಕ್ಕೆ ಪೂರಕವಾಗುವಂತೆ ಪೊಲೀಸ್ ಠಾಣೆಯಲ್ಲಿಯೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ . ತಕ್ಷೀರು ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿದೆ . ಅವರು ಕರಿಂಜೆ ಗ್ರಾಮದ ಸಂಕಪ್ಪ ಶೆಟ್ಟಿಯವರಿಗೆ ಸೇರಿದ ಗದ್ದೆಯಾಗಿರುತ್ತದೆ . ಕೋವಿಯಲ್ಲಿ ಬುಲೆಟ್ ಇತ್ತು. ಕೋವಿ ಚಾಲನಾ ಸ್ಥಿತಿಯಲ್ಲಿ ಇತ್ತೆ ಎಂಬುದನ್ನು ನಾನು ಪರಿಶೀಲನೆ ಮಾಡಿರುತ್ತೇನೆಯೋ ಇಲ್ಲವೋ ಎಂದು ಈಗ ನನಗೆ ನೆನಪಿಲ್ಲ .

ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖಾಧಿಕಾರಿಯಾಗಿರುವ ಕಾರಣ ಕೋವಿ ಚಾಲನಾ ಸ್ಥಿತಿಯಲ್ಲಿ ಇತ್ತೆ ಎಂಬುದನ್ನು ನಾನು ಪರಿಶೀಲನೆ ಮಾಡಿರುತ್ತೇನೆಯೋ ಇಲ್ಲವೋ ಎಂದು ಈಗ ನನಗೆ ನೆನಪಿಲ್ಲ .

ತಕ್ಷೀರು ಸ್ಥಳದಲ್ಲಿ ಹರಹಂತ ಕಾಂಪೌಂಡು ಎಂದು ಹೇಳಲಾಗಿದ್ದು , ಅದರ ಅಕ್ಕ -ಪಕ್ಕದಲ್ಲಿ ಮನೆಗಳು ಇವೆ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರು ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ . ವಿದುತ್ ಕಳ್ಳತನವಾಗಿದೆ ಮತ್ತು ದುರುಪಯೋಗವಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಮೆಸ್ಕಾಂ ರವರು ನನಗೆ ಯಾವುದೇ ದೂರನ್ನು ದಾಖಲು ಮಾಡಿರುವುದಿಲ್ಲ . ಈ ಬಾಬ್ತು ನಾನು ಮೆಸ್ಕಾಂ ಕಡೆಯಿಂದ ಯಾವುದೇ ಮಾಹಿತಿಯನ್ನು ಪಡೆದುಕೊಂಡಿಲ್ಲ . ಯಾವುದೋ ವಿದ್ಯುತ್ ತಂತಿ ತುಂಡಾಗಿ ಬಿದ್ದಿದ್ದು , ಅದರಿಂದ ಈ ಘಟನೆಯಾಗಿರುತ್ತದೆ , ಬದಲಾಗಿ ಆರೋಪಿಗಳಿಂದ ಅಲ್ಲ ಎಂದರೆ ಸರಿಯಲ್ಲ . ತೀರಿ ಹೋದ ವ್ಯಕ್ತಿಗಳು ರಾತ್ರಿಯ ಸಮಯದಲ್ಲಿ ಶಿಕಾರಿಗೆ ಹೋದ ಸಮಯದಲ್ಲಿ ತುಂಡಾಗಿ ಬಿದ್ದ ವಿದುತ್ ತಂತಿಗಳನ್ನು ತುಳಿದು ಅವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ .

ಮಹಜರಿನ ಸಮಯದಲ್ಲಿ ಮುಖ್ಯ ಪೇದೆ ಗಿರಿಯಪ್ಪ , ಪೇದೆ ಶಿವರಾಜ್ ರವರು ಇದ್ದರು. ಚಾಲಕನನ್ನು ಸೇರಿ 4 ಒಟ್ಟು ಜನ ಸಿಬ್ಬಂದಿವರ್ಗದವರು ಭೇಟಿ ನೀಡಿದ್ದೆವು . ಅವರನ್ನು ಹೊರತು ಪಡಿಸಿ ಬೇರೆ ಯಾರು ಹೋಗಿರುವುದಿಲ್ಲ . ನಿಪಿ-11 ನ್ನು ಪೊಲೀಸ್ ಠಾಣೆಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ . ಆ ದಿನ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ .

ನಿಪಿ-24 ನ್ನು ದಿಃ 21-11-2018 ರಂದು ಮಾಡಲಾಯಿತು . ನಿಪಿ-24 ನ್ನು ಮಾಡಿದ ಸಂದರ್ಭದಲ್ಲಿ ಒಟ್ಟು 4 ಜನರು ಭೇಟಿ ನೀಡಿದ್ದೆವು . ಅವರೆಂದರೆ ಗಿರಿಯಪ್ಪ , ಶಿವರಾಜ , ಅಖೀಲ್ ಅಹಮದ್ ಮತ್ತು ನಾನು . ಅವರನ್ನು ಹೊರತು ಪಡಿಸಿ ಬೇರೆ ಯಾರನ್ನೂ ಕರೆದುಕೊಂಡ ಹೋದ ಬಗ್ಗೆ ನೆನಪಿಲ್ಲ . ನಿಪಿ-24 ನ್ನು ಸಹ ಠಾಣೆಯಲ್ಲಿಯೇ ತಯಾರಿಸಲಾಯಿತು ಎಂದರೆ ಸರಿಯಲ್ಲ . ಯಾವುದೇ ವಸ್ತುಗಳನ್ನು ಸ್ವಾಧೀನ ಪಡಿಸಿಕೊಂಡಿಲ್ಲ , ಅದನ್ನು ಈ ಪ್ರಕರಣಕ್ಕೆ ಪೂರಕವಾಗುವಂತೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದ್ದು ಮತ್ತು ಈ ಪ್ರಕರಣಕ್ಕೆ ಪೂರಕವಾಗುವಂತೆ ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ . ಈ ಪ್ರಕರಣದಲಿಪ್ಲಿ ಆರೋಪಿತರದ್ದು ಯಾವುದೇ ತಪ್ಪಿಲ್ಲವೆಂದರೆ ಸರಿಯಲ್ಲ . ಮೃತರ ನಿರ್ಲಕ್ಷತದಿಂದಲೇ ಈ ಅವಘಡ ನಡೆದಿರುತ್ತದೆ ಎಂದರೆ ಸರಿಯಲ್ಲ . ಆರೋಪಿತರನ್ನು ದಸ್ತಗಿರಿ ಮಾಡಲಿಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-

ವ್ಯ ನ್ಯಾ.ಮತ್ತು ಪ್ರ.ದ.ನ್ಯಾ.ದಂ.
ಮೂಡಬಿದಿರೆ